# ಕುವೆಂಪು ಮತ್ತು ಕಂಬಾರರ ನಾಟಕಗಳು ಮುಂದಿಡುವ ರಂಗಕಲ್ಪನೆ

**ಪೃಥ್ವಿರಾಜ್ ಬಿ.**
ಸಹಾಯಕ ಪ್ರಾಧ್ಯಾಪಕರು
ಕನ್ನಡ ವಿಭಾಗ
ಪ್ರೇರಣಾ ಪ್ರಥಮ ದರ್ಜೆ ಕಾಲೇಜು
ಮಂಗಳೂರು.

**Article Link: https://aksharasurya.com/2024/03/prithviraj-b.php**

**DOI: https://doi.org/10.5281/zenodo.10775182**

## ABSTRACT:

ಪ್ರಸುತ್ತ ಸಂಶೋಧಾನ ಲೇಖನವು ಕುವೆಂಪು ಮತ್ತು ಕಂಬಾರರ ಕೃತಿಗಳಲ್ಲಿ ಹೊಸತನು ಹುಡುಕುವ ಪ್ರಯತ್ನವನ್ನು ಮಾಡಲಾಗಿದೆ. ಕುಂವೆಪು ಅವರಲ್ಲಿ ನವೋದಯ ಪ್ರಜ್ಞೆ ಕಾಣಿಸಿದ್ದರೆ ಕಂಬಾರರಲ್ಲಿ ದಲಿತರ ಪರ ಪ್ರಜ್ಞೆ ಕಾಣಿಸಿಕೊಂಡಿದೆ. ಈ ಲೇಖನವನ್ನು ವೀರೆಶ್ ಬಡೀಗಾರ್‌ರವರ 'ಕನ್ನಡ ಸಾಹಿತ್ಯ ಪರಂಪರೆ ಮತ್ತು ಕಂಬಾರರು' & ಉತ್ಥಾನಭಾರೀಘಾಟ್‌ನವರ 'ಕುವೆಂಪು ನಾಟಕಗಳು ಮುಂದಿಡುವ ರಂಗಕಲ್ಪನೆ' ಎಂಬ ಪುಸ್ತಕಗಳ ಹಿನ್ನಲೆಯಲ್ಲಿ ಬರೆಯಲಾಗಿದೆ. ಇದುವರೆಗೂ ಸಾಹಿತ್ಯ ವಲಯದಲ್ಲಿ ಕಂಬಾರರನ್ನು ಕೇವಲ ಅವರ ಸೃಜನಶೀಲ ಕಲಾಕೃತಿಗಳ ಮೂಲಕವಷ್ಟೇ ಹೆಚ್ಚು ಚರ್ಚಿಸಿದ್ದು ಕಾಣುತ್ತದೆ. ಕಂಬಾರರ ಸೃಜನಶೀಲ ಬರಹಗಳ ಜಗತ್ತು ಒಂದು ಕಡೆಯಾದರೆ, ಸಂಶೋದನೆ, ಜಾನಪದ, ಸಂಪಾದನೆ ಹಾಗೂ ವೈಚಾರಿಕತೆಗೆ ಸಂಬಂಧಿಸಿದ ಸೃಜನೇತರ ಬರಹ ಇನ್ನೊಂದು ಕಡೆಯಲ್ಲಿ ಇವೆ. ಭಾರತೀಯ ಸಾಹಿತ್ಯ ಸಂಸ್ಕೃತಿಗೆ ಸಂಬಂಧಸಿದಂತೆ ಅವರು ಎತ್ತುವ ಸೂಕ್ಷ್ಮ ಪ್ರಶ್ನೆಗಳು ಈ ಪುಸ್ತಕವನ್ನು ಓದುವ ಸಹೃದಯರಿಗೆ ಗಂಭೀರ ಅಧ್ಯಯನಕ್ಕೆ ದಾರಿ ಮಾಡಿಕೊಟ್ಟಿದೆ. ಕಂಬಾರರಿಗೆ ಜ್ಞಾನಪೀಠ ಪ್ರಶಸ್ತಿ ಬಂದ ಸವಿ ನೆನಪಿಗಾಗಿ ಕಂಬಾರರ ಸಾಹಿತ್ಯದ ಬಗ್ಗೆ ಬರೆದು ಪ್ರಕಟಿಸಬೇಕೆನ್ನುವ ಮಾಹದಾಸೆ ಡಾ. ವೀರೇಶ್ ಬಡಿಗೇರೆಯವರಿಗೆ ಇದ್ದಿತ್ತು. ಆದರೆ ಪ್ರಾರಂಭದ ದಿನಗಳಲ್ಲಿ ಆರ್ಥಿಕ ಸಮಸ್ಯೆಯಿಂದ ಅದು ಸಾಧ್ಯವಾಗಲಿಲ್ಲ ನಂತರ ಸಾಧ್ಯವಾಯಿತು ಎಂಬುವುದನ್ನು ತಮ್ಮ ಕೃತಿಯ ಮೂಲಕ ತಿಳಿಸಿದ್ದಾರೆ.

ನಾವು ಯಾವುದನ್ನು ಪಾಶ್ಚತ್ಯರಿಂದ ಹೊಸದೆಂದು ನಂಬಿ ತರುತ್ತೇವೆಯೋ ಅದು ನಮ್ಮಲ್ಲಿ ಇದೆ ಎನ್ನುವ ಅಭಿಪ್ರಾಯ ಕಂಬಾರರದಾಗಿತ್ತು. ಕನ್ನಡ ಸಾಂಸ್ಕೃತಿಕ ಪರಂಪರೆಯನ್ನು ಕಂಬಾರರು ಅನುಸಂದಾನ ಮಾಡುತ್ತಾರೆ. ಆ ಮೂಲಕ ಅಪಮಾನಿತವಾಗಿದ್ದ ಆತ್ಮಜ್ಞಾನ ಹಾಗು ದೇಶಿ ಅನುಭವಕ್ಕೆ ಆತ್ಮ ವಿಶ್ವಾಸ ತುಂಬುತ್ತಾರೆ.

ಕುವೆಂಪು ನಾಟಕಗಳು ಮುಂದಿಡುವ ರಂಗಕಲ್ಪನೆ ಈ ಪ್ರಬಂಧವು ಕುವೆಂಪು ನಾಟಕಗಳ ಮೂಲಕ ಕನ್ನಡದ್ದೇ ಆದ ಒಂದು ರಂಗಕಲ್ಪನೆಯನ್ನು ಸೃಜಿಸಿಕೊಳ್ಳುಬಹುದೇ ಎಂಬ ಪ್ರಶ್ನೆಯನ್ನು ಕೇಂದ್ರದಲ್ಲಿಟ್ಟುಕೊಂಡು ತನ್ನ ಚರ್ಚೆಯನ್ನು ರೂಪಿಸುತ್ತದೆ. ಅಧ್ಯಯನದ ಪ್ರಮುಖ ಭಾಗವು ಈ ಕೇಂದ್ರ ಪ್ರಶ್ನೆಯ ಸುತ್ತ ತನ್ನ ಗ್ರಹಿಕೆಗಳನ್ನು ಕಟ್ಟುತ್ತದೆ. ಇದು ಕುವೆಂಪು ನಾಟಕಗಳನ್ನು ರಂಗ ಪರಿಭಾಷೆಗಳ ಮೂಲಕ ನೋಡುವ ವಿಶ್ಲೇಷಿಸುವ ಪ್ರಯತ್ನವಾಗಿದೆ. ಈ ಅಧ್ಯಯನದಲ್ಲಿ ಸಾಹಿತ್ಯ ವಿಮರ್ಶೆಯ ಅನೇಕ ಪರಿಕಲ್ಪನೆಗಳನ್ನು ಬಳಸಿಕೊಂಡರು. ನಾಟಕಗಳು ವಸ್ತುವಿನ ಕುರಿತ ಚರ್ಚೆ ಕಂಡು ಬಂದಿಲ್ಲ. ಲೇಖಕರು ತಿಳಿಸುವ ಹಾಗೆಯೇ ಈ ಅಧ್ಯಯನವು ನಾಟಕಗಳ ವಸ್ತುಗಿಂತಲೂ ಹೆಚ್ಚಾಗಿ ಅವುಗಳ ಸ್ವರೂಪದ ಕುರಿತ ಚರ್ಚೆಯನ್ನು ನಡೆಸಲು ಆಸಕ್ತವಾಗಿದೆ. ಅಧ್ಯಯನದ ವಿಧಾನದಲ್ಲಿ ತಿಳಿಸಿರುವಂತೆ ಲೇಖಕರು ಈ ನಾಟಕವನ್ನು ಅಧ್ಯಯನಕ್ಕೆ ಒಳಪಡಿಸುವಾಗ ರೂಪನಿಷ್ಠ ವಿಮರ್ಶಾ ಮಾರ್ಗದ ಮೂಲಕ ವಿಮರ್ಶಿಸಿದ್ದಾರೆ ರೂಪನಿಷ್ಠವಾದ ಎಂದರೆ ವಸ್ತುವನ್ನು ಹಿನ್ನೆಯಲ್ಲಿರಿಸಿ ಕೃತಿಯ ಸ್ವರೂಪವನ್ನು ಮುಟ್ಟುಗೊಳಿಸಿ ಚರ್ಚಿಸುವುದು. ಇಲ್ಲಿ ಲೇಖಕರು ಕೃತಿಯನ್ನು ಸಣ್ಣ ಸಣ್ಣ ಘಟಕಗಳನ್ನಾಗಿ ಒಡೆದು ನೋಡುವ ಮೂಲಕ ಕೃತಿಯನ್ನು ವಿಶ್ಲೇಷಣೆಗೆ ಮುಂದಾಗುತ್ತಾರೆ.

## KEYWORDS:

ಸೃಜನಶೀಲ ಬರಹ, ಸೃಜನೇತರ ಬರಹ, ರಂಗ ಕಲ್ಪನೆ, ರಂಗ ಪರಿಭಾಷೆ, ರೂಪನಿಷ್ಠ ವಿಮರ್ಶೆ, ರೂಪನಿಷ್ಠ ವಿಧಾನ.

**ಕನ್ನಡ ಸಾಹಿತ್ಯ ಪರಂಪರೆ ಮತ್ತು ಕಂಬಾರರು:**

ಕಂಬಾರರು ತಮ್ಮ ಬರಹವನ್ನು ಸಮಕಾಲೀನ ಸಾಂಸ್ಕೃತಿಕ ರಾಜಕಾರಣದ ವಿಶ್ಲೇಷಣೆಗೆ ಹರಿತಗೊಳಿಸುತ್ತಾರೆ. ಹಾಗೆ ಮಾಡುವಾಗ ಪ್ರಭುತ್ವ ರಾಜಕೀಯ ನಿರ್ದಿಷ್ಟತೆಗಳನ್ನು ಮೀರುವುದಲ್ಲದೆ ಅದರ ಜನ ವಿಶೇಷ ನೆಲೆಗಳನ್ನು ವಿಮರ್ಶೆಗೆ ಒಳಪಡಿಸುತ್ತಾರೆ. ಕಂಬಾರರ ಬರಹದ ಇನ್ನೊಂದು ವಿಶೇಷ ಕಾಳಜಿ ಎಂದರೆ ಕನ್ನಡ ಭಾಷೆ ಹಾಗೂ ಸಂಸ್ಕೃತಿಗಳಲ್ಲಿನ ತಪ್ಪು ಗ್ರಹಿಕೆಗಳನನ್ನು ಸರಿಪಡಿಸುವುದು ಆಗಿದೆ ಎಂಬುವುದು ಡಾ ವಿರೇಶ ಬಡಿಗೇರ ಈ ಕೃತಿಯಲ್ಲಿ ಕಂಡುಬರುತ್ತದೆ. ಕಂಬಾರರಿಗೆ ನಿರ್ಬಲ ನಾಗರಿಕ ಕಥನಗಳಿಗಿಂತ, ತನ್ನ ಸಾಮಾಜಿಕ ಕಥನಗಳು ಮುಖ್ಯವಾಗುತ್ತದೆ ಎಂಬುವುದನ್ನು ಕಂಬಾರರ ಕೃತಿಗಳನ್ನು ವಿಶ್ಲೇಷಣೆ ಮಾಡಿ ಡಾ ವಿರೇಶ ಬಡಿಗೇರರವರು ಕಂಡುಕೊಂಡ ವಿಷಯ ಇವರ ಈ ಮಾತು ಸತ್ಯಕ್ಕೆ ಹತ್ತಿರವಾಗಿದೆ.

ವಿರೇಶ ಬಡಿಗೇರರವರು ಕಂಬಾರರ ಎರಡನೇ ಲೇಖನವನ್ನು ಸಂಗ್ರಹಿಸಿ ತಮ್ಮ ಕೃತಿಯಲ್ಲಿ ಬರೆಯುವಾಗ ಅದನ್ನು ಹೆಚ್ಚು ವಿಸ್ತರಿಸಿ ಬರೆದಿದ್ದಾರೆ. ಡಿ ಆರ್ ನಾಗರಾಜ್ ಅವರು ಕಂಬಾರರನ್ನು ಗುರುತಿಸಿ ಹೇಳಿದ ಮಾತನ್ನು ವಿರೇಶ ಬಡಿಗೇರರವರು ತಮ್ಮ ಕೃತಿಯಲ್ಲಿ ಸೇರಿಸಿದ್ದಾರೆ ಅವು ಹೀಗಿವೆ ಡಿ ಆರ್ ನಾಗಾರಾಜ್ ಅವರು ಗುರುತಿಸುವಂತೆ 'ಒಂದೆಡೆ ನಾವು ನಮ್ಮ ಸ್ವಂತ ಭಾಷೆಗಳ ಮೂಲಕವಾಗಿಯೇ ನಮ್ಮ ಪರಂಪರೆಗಳನ್ನು ಜೀವನ ದರ್ಶನಗಳನ್ನು ಪೆಡೆದುಕೊಳ್ಳುತ್ತ ಬರುತ್ತೇವೆ ಇನ್ನೊಂದೆಡೆ ಅವೇ ಪರಂಪರೆ ದರ್ಶನಗಳ ಬಗ್ಗೆ ಮಾತನಾಡುವಾಗ ಅವುಗಳನ್ನು ಸಮರ್ಥಿಸಿಕೊಳ್ಳುವಾಗ ಅವುಗಳ ಭಾಷೆಯನ್ನು ಬಿಟ್ಟು ಅನ್ಯಭಾಷೆಯೊಂದನ್ನು ಒಳಸಬೇಕಾದಂತಹ ಅಸಹಾಯಕತೆಯಲ್ಲಿ ಸಿಲುಕಿದ್ದೇವೆ' ಎನ್ನುತ್ತಾರೆ ಆದರೆ ಕಂಬಾರರ ಬರಹದ ಬಹುಮುಖ್ಯ ಕಾಳಜಿ ಈ ದೇಶಿಯತೆಯನ್ನು ಹುಡುಕುವ ಮತ್ತು ಸಶಕ್ತವಾಗಿ ಕಟ್ಟಿಕೊಳ್ಳುವುದರಲ್ಲಿ ಎದ್ದು ಕಾಣುತ್ತದೆ.

ಕನ್ನಡ ವಿಮರ್ಶೆಯಲ್ಲಿ ಕಂಬಾರರ ಇದುವರೆಗಿನ ಅಧ್ಯಯನ ಬಹುಮಟ್ಟಿಗೆ ಕಾವ್ಯ, ನಾಟಕ, ಕಾದಂಬರಿ ಪ್ರಕಾರ ಕೇಂದ್ರಿತವಾದದ್ದು. ಬಡಿಗೇರರ ಈ ಕೃತಿ ಕಂಬಾರರ ಸಂಶೋಧನೆ, ಸಂಸ್ಕೃತಿ, ಚಿಂತನೆ, ಸಂಪಾದನೆ, ಶಿಕ್ಷಣ, ಜಾನಪದ ಈ ವಲಯಗಳಲ್ಲಿ ಒಳಗೊಂಡು ರೂಪಿತವಾಗಿದೆ ಎಂಬುವುದನ್ನು ಡಾ ನರಹಳ್ಳಿ ಬಾಲುಸುಬ್ರಹ್ಮಣ್ಯರು ಈ ಕೃತಿಯ ಮುನ್ನುಡಿಯಲ್ಲಿ ತಿಳಿಸಿದ್ದಾರೆ. ನಿಜವಾಗಿಯೂ ಈ ಕೃತಿಯು ಕಂಬಾರರ ಸಾಹಿತ್ಯವನ್ನು ಸಮಗ್ರ ಅಧ್ಯಯನ ಮಾಡವುದಕ್ಕೆ ಆಕರವಾಗಬಲ್ಲದ್ದು.

ಕಂಬಾರರು ಹೊಸದನ್ನು ಏನೂ ಹೇಳಿಲಿಲ್ಲ ಎನ್ನುವ ಆರೋಪಗಳಿಗೆ, ವಿರೇಶ ಬಡಿಗೇರರು ತಮ್ಮ ಕೃತಿಯ ಮೂಲಕ ಉತ್ತರಿಸಿದ್ದಾರೆ. ಇಲ್ಲಿ ಅವರು ತಿಳಿಸುವಂತೆ, ಬೇರೆಯವರಂತೆ ಕಂಬಾರರು ಅನ್ಯಮಾದರಿಗಳನ್ನು ಮುಂದೆ ಮಾಡಿಕೊಂಡು ಪಠ್ಯಕೇಂದ್ರಿತ ಎನ್ನುವ ಖಂಡ ತುಂಡ ಅಧ್ಯಯನಗಳಿಗೆ ಇಳಿಯುವುದಿಲ್ಲ. ಇರುವುದರಲ್ಲಿಯೇ ಅಖಂಡತೆಯ ಶೋದಕ್ಕೀಳಿಯುತ್ತಾರೆ ಕಂಬಾರರಿಗೆ ನಿರ್ಬಲ ನಾಗರಿಕ ಕಥನಗಳಿಗಿಂತ ತನ್ನ ಸಾಮಾಜಿಕ ಕಥನಗಳು ಮುಖ್ಯವಾಗುತ್ತದೆ. ಅವು ಎಷ್ಟೋ ಹಳತಾಗಿದ್ದರೂ ಅವುಗಳನ್ನು ಜೋಡಿಸಿ ಅದರೊಳಗೆ ಫಲವಂತಿಕೆ ಸಂಭ್ರಮ ಹಾಗೂ ಸಮೃದ್ಧಿಯ ಆಶಯಗಳನ್ನು ಪುನರ್ ಸಂದರ್ಭಿಕರಣಗೊಳಿಸುತ್ತಾರೆ. (ಕನ್ನಡ ಸಾಹಿತ್ಯ ಪರಂಪರೆ ಮತ್ತು ಕಂಬಾರರು, ಪು.ಸಂ. 29)

ಬಡಿಗೇರರು ತಿಳಿಸುವಂತೆ ಕಂಬಾರರು ಗತಕಾಲದ ಸಮೃದ್ಧತೆಯಲ್ಲಿ

ಉಳಿದಿರುವ ಚೈತನ್ಯವನ್ನು ಉದ್ದೀಪನಗೊಳಿಸಿಕೊಂಡು ತಾವೀಗಾಗಲೇ ಸೃಜಿಸಿಕೊಂಡಿರುವ ಪುರಾಣಕ್ಕೆ ಹೊಸ ಆಯಾಮ ಕೊಡುವ ತುರ್ತನ್ನು ಅವರ ಒಟ್ಟು ಬರಹದಲ್ಲಿ ಕಾಣುತ್ತೇವೆ.

ಕಂಬಾರರ ಸಾಹಿತ್ಯದ ಬಗ್ಗೆ ಸೂಕ್ಷ್ಮವಾಗಿ ವಿಶ್ಲೇಷಿಸುತ್ತ, ಬಡಿಗೇರರು ದಾಖಲಿಸುತ್ತಾ ಹೋಗುತ್ತಾರೆ. ಇದರಲ್ಲಿ ಕಂಡು ನನಗೆ ಗಮನಸೆಳೆದ ಸಾಲು ಈ ರೀತಿಯಾಗಿದೆ, 'ಕಂಡು ಬಂದ ಜಾನಪದ ಜಗತ್ತು ಆಧುನಿಕತೆಯ ಪ್ರವೇಶದಿಂದ ಛಿದ್ರಗೊಂಡ ಬಗ್ಗೆ ಕವಿಗೆ ತುಂಬಾ ವಿಷಾದವಿದೆ' ಎಂದು ಬಡಿಗೇರರು ತಿಳಸಿದ್ದಾರೆ. ಈ ವಿಷಾದ ಬರೀ ವಿಷಾದವಾಗುಳಿಯದೆ ಅದು ಪರ್ಯಾಯದ ಪುನರ್ ಸೃಷ್ಠಿಗೆ ಹಾತೊರೆಯುತ್ತದೆ ಆಶೀಶ್ ನಂದಿಯವರ ಒಂದು ಮಾತು ಇಲ್ಲಿ ಮುಖ್ಯವೆನಿಸುತ್ತದೆ.

'ಗಾಂಧೀಜಿಯ ಅಲೋಚನಾ ಕ್ರಮಗಳು ಪಶ್ಚಿಮದ ಕಡೆಗೆ ಮುಖಮಾಡಿ ನಿಂತಿವುಗಳಲ್ಲಿ ಗಾಂಧೀಜಿಯ ಅಲೋಚನಾ ಕ್ರಮವು ಹೆಚ್ಚು ಜನಪದೀಯವಾದ ಭಾರತೀಯ ಒಳ ಸಂಸ್ಕೃತಿ ಚೈತನ್ಯವನ್ನು ಒಳಗೊಂಡಿರುವಂತಹದ್ದು' (ಆಶೀಶನಂದಿ ವಿಚಾರ, ಪುಟ ಸಂಖ್ಯೆ 22:1995 ಕನ್ನಡ ಸಾಹಿತ್ಯ ಪರಂಪರೆ ಮತ್ತು ಕಂಬಾರರು ಡಾ ವಿರೇಶ ಬಡಿಗೇರ ಪುಟಸಂಖ್ಯೆ 39) ಗಾಂಧೀಜಿಯವರ ಈ ದೇಶಿ ಮಾದ ರಿಯ ಆಲೋಚನಾಕ್ರಮಗಳು ಕಂಬಾರರಲ್ಲೂ ಕಂಡು ಬರುತ್ತವೆ ಇಲ್ಲಿ ಅವೇ ಪ್ರಧಾನ ಕೂಡ ಆಧುನಿಕ ಭಾರತದ ಚರಿತ್ರೆಯನ್ನು ಪಶ್ಚಿಮದ ಗ್ರಹಿಕೆಯಲ್ಲಿ ವ್ಯಾಖ್ಯಾನಿಸುವುದು ಒಂದು ಕ್ರಮವಾದರೆ ಇನ್ನೊಂದು ಅದರ ಅಂತ ಪ್ರಜ್ಞೆಯಿಂದ ಅರ್ಥೈಸುವುದು.

ಕಂಬಾರರ ಕೃತಿಯಲ್ಲಿ ರೂಪುಗೊಂಡ ಕಾಮಪ್ರಜ್ಞೆ ತುಂಬಾ ಭಿನ್ನವಾಗಿ ಗಂಡು ಹೆಣ್ಣಿನ ಆಪ್ತ ಅನುರಾಗದ ಒಲುಮೆಯಾಗಿದೆ. ಸೃಷ್ಟಿಯ ಸಂಕೇತವಾದ ಕಾಮವನ್ನು ಉನ್ನತ ನೆಲೆಯಲ್ಲಿ ಕಂಬಾರರು ಗ್ರಹಿಸುತ್ತಾರೆ. ಇಲ್ಲಿನ ಕಾಮ ಮೋಹದಿಂದ ಕೂಡಿದ್ದಲ್ಲ, ಪುರುಷರ್ಥಗಳನ್ನು ಈ ಪ್ರೇಮಮಯ ಕಾಮಕ್ಕೆ ಪ್ರಾಶಸ್ತ್ಯವಿದೆ ಹೀಗಾಗಿ ಕಂಬಾರರರಲ್ಲಿ ಪ್ರೇಮವನ್ನು ಕಾಣುತ್ತೇವೆ. ಹೊರತು ವಿಕೃತ ಕಾಮವನ್ನಲ್ಲ ಎಂಬುವುದು ಕಂಬಾರರ ಕುರಿತು ಲೇಖಕರ ಅಭಿಪ್ರಾಯವಾಗಿದೆ.

ಮೋಜಿನ ಬದುಕನ್ನು ಕುರಿತು ಜಾನಪದ ಹಾಡೊಂದರ ಮೂಲಕ ವೀರೇಶ ಬಡಿಗೇರರು ವಿವರಿಸಿದ್ದಾರೆ.

**ಕೋಳಿ ಕೂಗ್ಯಾವ ತನ್ನ ಯಗಳೇದ ಹೋತ್ತಗಿ**
**ಸೂಳೀಯ ಮನಿಯಾಗ ದೊರಿಮಗ ತಾ ಕುಂತ**
**ಕೋಳಿಯ ಗೋಣ ಮುರಸ್ನಾನ**

ಶ್ರಮ ಸಂಸ್ಕೃತಿಯ ಪ್ರತಿಭಟನಾ ನೆಲೆಯನ್ನು ಇಲ್ಲಿ ಕಾಣಬಹುದು. ಶ್ರಮ ಬದುಕಿನ ಪ್ರತೀಕವಾದ ಕೋಳಿಯ ಸ್ವಚ್ಛಂದವಾದ ಕ್ರಿಯಾಶೀಲತೆಯನ್ನು ಸಮಯಪ್ರಜ್ಞೆಯನ್ನು ಆಧುನಿಕ ಮನಸ್ಸು ಮುಟ್ಟುಗೋಲು ಹಾಕುತ್ತದೆ. ಪರಂಪರೆಯಿಂದ ಬಂದದ್ದನ್ನು ತನಗೆ ಬೇಡವಾದದ್ದನ್ನು ಅದು ನುಂಗಿ ಹಾಕುತ್ತದೆ. ಅಂದರೆ ಅಂತಹ ಆತಂಕಮಯ ಕ್ಷಣಗಲ್ಲೂ ಕೂಡ ಸ್ವಾಭಿಮಾನಿಯಾದ ಶ್ರಮ ಬದುಕು ತನ್ನ ತೀಕ್ಷ್ಣ ಪ್ರತಿಕ್ರಿಯೆಯನ್ನು ತೋರಿಸುತ್ತದೆ.

ಇಷ್ಟೇ ಅಲ್ಲದೆ ಕನ್ನಡ ಸಾಹಿತ್ಯ ಪರಂಪರೆ ಮತ್ತು ಕಂಬಾರರು ಎಂಬ ಲೇಖನವು ಕಂಬಾರರಿಗೆ ಜ್ಞಾನಪೀಠ ಪ್ರಶಸ್ತಿ ಬಂದ ಸಂದರ್ಭದಲ್ಲಿ ವಿವಿಧ ಶಾಲಾ ಕಾಲೇಜುಗಳಲ್ಲಿ ಮಾಡಿದ ಭಾಷಣ ಇದರ ಬರಹ ರೂಪವಾಗಿದೆ. ಕಂಬಾರರು ಬರೆದ 'ಸಾಂಸ್ಕೃತಿಕ ವಿಸ್ಮೃತಿ ಕಂಬಾರರ ಚಿಂತನೆಗಳು' ಈ ಲೇಖನವು ಜುಲೈ 4 ರಿಂದ 1999ರಲ್ಲಿ ವಾರ ಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಆ ಲೇಖನವು ವೀರೇಶ ಬಡಿಗೇರರು ಶೀರ್ಷಿಕೆಯನ್ನು ಬದಲಿಸದೆ ಈ ಕೃತಿಯಲ್ಲಿ ವಿವರಿಸಿದ್ದಾರೆ. ಕಂಬಾರರ ಕೃತಿಗಳನ್ನು ತಾಯಿ ತತ್ವದ ನೆಲೆಗಳು ಇವು 2008ನೇ ಸಾಲಿನಲ್ಲಿ ಎಂ.ಫಿಲ್ ವಿದ್ಯಾರ್ಥಿಗಳಿಗಾಗಿ ನೀಡಿದ ವಿಶೇಷ ಉಪನ್ಯಾಸವನ್ನು ಈ ಕೃತಿಯಲ್ಲಿ ಸೇರಿಸಿ ಕೃತಿಯ ವ್ಯಾಪ್ತಿಯನ್ನು ವಿಸ್ತರಿಸಿದ್ದಾರೆ.

ಕಂಬಾರರಿಗೆ ಜ್ಞಾನಪೀಠ ಬಂದ ಹೊತ್ತಿನಲ್ಲಿ ಧಾರವಾಡದಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘದವರು ನಡೆಸಿದಂತಹ ವಿಚಾರ ಸಂಕೀರ್ಣದಲ್ಲಿ ಮಂಡಿಸಿದ ಪ್ರಬಂಧ ಒಟ್ಟು ತಾತ್ವರ್ಯವು ಈ ಲೇಖನದಲ್ಲಿ ಬರೆದು ಕೃತಿಯ ಪರಿವಿಡಿಯಲ್ಲಿ ಸೇರಿಸಿದ್ದಾರೆ. ಕಂಬಾರರ 'ಅವಧೂತ ಪ್ರಜ್ಞೆ' ಎಂಬ ಲೇಖನ ಕಂಬಾರರ ಗೆಳೆಯರೊಂದಿಗೆ ಚರ್ಚಿಸಿದ ಸಂಗತಿಗಳು ಇವೆ. ಕಂಬಾರರ ಸಾಹಿತ್ಯ ಭಾಷಿಕ ಚಹರೆ ಎಂಬ ಲೇಖನವನ್ನು ಕನ್ನಡ ವಿಶ್ವವಿದ್ಯಾನಿಲಯದ ಅದ್ಯಾಪನ ಸಂಘವು ನಡೆಸಿ ಕಂಬಾರರ ಸಾಹಿತ್ಯ ಸಜನಶೀಲ ಪ್ರತಿಕ್ರಿಯೆ ಎಂಬ ವಿಚಾರಸಂಕಿರಣದಲ್ಲಿ ಮಂಡಿಸಿದ್ದ ಲೇಖನದ ಟಿಪ್ಪಣಿಯನ್ನು ಈ ಕೃತಿಯಲ್ಲಿ ಸೇರಿಸಿ ಹೆಚ್ಚು ವಿಸ್ತಾರವಾಗಿ ವಿವರಿಸಿದ್ದಾರೆ. 10.02.2011 ರಂದು ಜೆ.ಟಿ ಕಾಲೇಜು ಗದಗಿನವರು ನಡೆದ ವಿಶೇಷ ಉಪನ್ಯಾಸದಲ್ಲಿ ಮಂಡಿಸಿದ ಪ್ರಬಂಧ ಕಂಬಾರರ ಶೈಕ್ಷಣಿಕ ಚಿಂತನೆಗಳು ಈ ಕೃತಿಯಲ್ಲಿ ಹೊಸಬಗೆಯನ್ನು ಮೂಡಿಸಿದೆ. ಕಂಬಾರರಿಗೆ ಜ್ಞಾನಪೀಠ ಪ್ರಶಸ್ತಿ ಸಂದರ್ಭದಲ್ಲಿ ಅಭಿನಂದನೆಯ ರೂಪದಲ್ಲಿ ಹೊಸತು ಪತ್ರಿಕೆಗೆ ಬರೆದ ಲೇಖನದ ಸಾರ ಈ ಕೃತಿಯಲ್ಲಿ ಇದೆ.

**ಕುವೆಂಪು ನಾಟಗಳು ಮುಂದಿಡುವ ರಂಗಕಲ್ಪನೆ:**

ಈ ಕೃತಿ ಬರುವ ಪೂರ್ವದಲ್ಲಿ ವೈಚಾರಿಕತೆ, ಪ್ರತಿಪಾದಿಸಿದ ಸಾಮಾಜಿಕ ನ್ಯಾಯ, ಅವುಗಳ ಪ್ರಸ್ತುತತೆ, ಇಂತಹ ವಿಚಾರಗಳಲ್ಲಿ ವಿಮರ್ಶಕರ ಗಮನ ಸೆಳೆದಿರುವುದು. ಆದರೆ ಉತ್ಥಾನಭಾರೀಘಾಟ್‌ರವರು ಕುವೆಂಪುರವರ ನಾಟಕವನ್ನು ಬೇರೆ ದೃಷ್ಟಿಯಿಂದ ಅವುಗಳನ್ನು ಅಧ್ಯಯನಕ್ಕೆ ಒಳಪಡಿಸಿದ್ದಾರೆ.

ಅಧ್ಯಯನದ ವಿಧಾನದಲ್ಲಿ ತಿಳಿಸಿರುವಂತೆ ಲೇಖಕರು ಈ ನಾಟಕವನ್ನು ಅಧ್ಯಯನಕ್ಕೆ ಒಳಪಡಿಸುವಾಗ ರೂಪನಿಷ್ಠ ವಿಮರ್ಶಾ ಮಾರ್ಗದ ಮೂಲಕ ವಿಮರ್ಶಿಸಿದ್ದಾರೆ ರೂಪನಿಷ್ಠವಾದ ಎಂದರೆ ವಸ್ತುವನ್ನು ಹಿನ್ನೆಯಲ್ಲಿಸಿರಿ ಕೃತಿಯ ಸ್ವರೂಪವನ್ನು ಮುಟ್ಟುಗೊಳಿಸಿ ಚರ್ಚಿಸುವುದು. ಇಲ್ಲಿ ಲೇಖಕರು ಕೃತಿಯನ್ನು ಸಣ್ಣ ಸಣ್ಣ ಘಟಕಗಳನ್ನಾಗಿ ಒಡೆದು ನೋಡುವ ಮೂಲಕ ಕೃತಿಯ ವಿಶ್ಲೇಷಣೆಗೆ ಮುಂದಾಗುತ್ತಾರೆ.

ಈ ಕೃತಿಯಲ್ಲಿ ಲೇಖಕರು ಅಧ್ಯಯನದ ವಿಧಾನ ಮತ್ತು ಮಹತ್ವವನ್ನು ತಿಳಿಸಿ ಮೂರು ಭಾಗಗಳಾಗಿ ವಿಂಗಡಿಸಿದ್ದಾರೆ. ಕೊನೆಗೆ ಮುಕ್ತಾಯ ಎಂಬ ಶೀರ್ಷಿಕೆಯಲ್ಲಿ ಕೃತಿಯ ಬಗ್ಗೆ ತಮ್ಮ ನಿಲುವನ್ನು ವ್ಯಕ್ತಪಡಿಸಿದ್ದಾರೆ.

ನಾಟಕ ಕೃತಿ ಹಾಗೂ ರಂಗ ಕೃತಿಯಲ್ಲಿ ಸ್ವತಂತ್ರ ಅಸ್ತಿತ್ವ ಹೊಂದಿರುವ ಕಲಾಕೃತಿಗಳಾಗಿ ನೋಡಬೇಕು ಎನ್ನುವುದು ಪ್ರಸ್ತುತ ಇರುವ ಸಮಸ್ಯೆಯಾಗಿದೆ. ಕುವೆಂಪುರವರು ನಾಟಕಗಳ ರಂಗಸಾದ್ಯತೆಗೆ ಬಹಳ ಮಿತಿಗಳಿವೆ ಎಂದು ನಿರ್ಧರಿಸಿಕೊಂಡು ನಾಟಕಗಳನ್ನು ರಂಗದಿಂದ ಬಹುತೇಕ ಹೊರಗೆ ಇಟ್ಟಿದ್ದಾರೆ.

ಕನ್ನಡದಲ್ಲಿ ನಾಟಕ ಪರಂಪರೆ ಎಂಬ ವಿವರವನ್ನು ಮುಂದುವರೆಸುತ್ತ, ಕೆ.ವಿ ಸುಬ್ಬಣ್ಣನವರು ಅಭಿಪ್ರಾಯಪಡುವ ಮಾತುಗಳು ಈ ಕೃತಿಯಲ್ಲಿ ಗಮನ ಸೆಳೆದಿವೆ. ಆ ಮಾತು ಹೀಗಿದೆ: 'ಕನ್ನಡದಲ್ಲಿ ನೂರಾರು ವರ್ಷಗಳಿಂದ ಬೆಳೆದು ಬಂದಿರುವ ರಂಗ ಪರಂಪರೆಗಳಿದ್ದವು ಎಂಬುದು ತಿಳಿಯುತ್ತದೆ. ಈ ಪರಂಪರೆಗಳು ಎಂದೂ ಲಿಖಿತ ನಾಟಕಗಳ ಆಧಾರದ ಮೇಲೆ ಬೆಳೆದು ಬಂದದ್ದಲ್ಲ ಅವರು ಕೊಡುವ ಯಕ್ಷಗಾನದ ಉದಾಹರಣೆಯನ್ನು ಗಮನಿಸಿರೆ. ಅದು ರಂಗ ಪರಂಪರೆಯೇ ಆದರೂ ಅಲ್ಲಿ ಯಾವುದೇ ಬಗೆಯ ಲಿಖಿತ ಪಠ್ಯವಿರುವುದಿಲ್ಲ. ಬದಲಾಗಿ, ಲಿಖಿತವಾಗಿ ಅಸ್ತಿತ್ವದಲ್ಲಿದೆ. ಕಾವ್ಯ ಹಾಗೂ ಸಂಭಾಷಣೆ ಮಿಶ್ರಿತ ಪ್ರಯೋಗವು ರಂಗದ ಮೇಲಾಗಿರುತ್ತದೆ. ಹಾಗಾಗಿ ಆಧುನಿಕ ನಾಟಕ ವಿಮರ್ಶೆಯು ಕನ್ನಡದಲ್ಲಿನ ಲಿಖಿತ ನಾಟಕದ ವಿಮರ್ಶೆಯು, ಕನ್ನಡದಲ್ಲಿನ ಲಿಖಿತ ನಾಟಕದ ಅಭಾವ ಆದರೆ ರಂಗಪರಂಪರೆಯ ಅಭಾವದಲ್ಲಿ ಎಂಬ ಸತ್ಯವನ್ನು ಗಣಿಸಲಿಲ್ಲ' ಎಂದು

ಸುಬ್ಬಣ್ಣನವರ ನಿಲುವು.

‘ಆಧುನಿಕ ಕನ್ನಡ ರಂಗ ಭೂಮಿಯ ಪಾಲಿಗೆ ಭಾರತೀಯ ನಾಟಕ ಎನಿಸಿದ್ದು ಸಂಸ್ಕೃತಿ ನಾಟಕವಷ್ಟೇ, ತಂತ್ರಗಾರಿಕೆಯ ಸಲುವಾಗಿ, ನಾಟಕಕ್ಕೆ ರಂಗನ್ನು ತುಂಬುವಂತಹ ಕಾರಣಗಳಿಗಾಗಿ ಆಧುನಿಕ ಕನ್ನಡ ನಾಟಕವು ಯಕ್ಷಗಾನ–ಬಯಲಾಟಗಳಂಥ ದೇಶಿ ರಂಗಪರಂಪರೆಗಳಿಂದ ಅಷ್ಟಿಷ್ಟನ್ನು ಪಡೆಯುವಂತಾಗಿದ್ದರೂ, ಆ ಯಾವ ಪ್ರಯತ್ನಗಳು ಅವುಗಳನ್ನು ಜೀವಂತ ರಂಗ ಪರಂಪರೆಗಾಗಿ ಬಳಸಿಕೊಳ್ಳಲಿಲ್ಲ’ ಎಂದು ಚಂದ್ರ ಶೇಖರ್ ಕಂಬಾರರು ಎಂಬ ಪುಸ್ತಕದಲ್ಲಿ 2004 ರಲ್ಲಿ ಬರೆದಿರುತ್ತಾರೆ. ಅಲ್ಲಿ ಬರುವ ವಿಷಯವನ್ನು ಈ ಕೃತಿಯಲ್ಲಿ ಸೇರಿಸಿ ಎರಡು ಲೇಖಕರ ಈ ಮಾತನ್ನು ಗಮನದಲ್ಲಿರಿಸಿ ಈ ರೀತಿ ವ್ಯಕ್ತಪಡಿಸುತ್ತಾರೆ. ಬರಿಯ ತಂತ್ರಗಳಷ್ಟೇ ರಂಗ ಪರಂಪರೆಯನ್ನು ರೂಪಿಸಲಾಗುವುದಿಲ್ಲ. ಬದಲಾಗಿ ರಂಗ ಪರಂಪರೆಗಳು ವಿವಿಧ ಕಥನಗಳು ಆ ತಂತ್ರಗಳನ್ನು ರೂಪಿಸಿರುತ್ತವೆ. ಪ್ರತಿಯಾಗಿ ಆ ತಂತ್ರಗಳು ಆ ರಂಗ ಪರಂಪರೆಯ ಅಸ್ಥಿತೆಯಾಗಿ ರೂಪುಗೊಳ್ಳುತ್ತವೆ. ಹಾಗಾಗಿ ಖಾಲಿ ತಂತ್ರಗಳ ಬಳಕೆಯು ಪರಂಪರೆಯ ದೃಷ್ಟಿಯಿಂದ ಯಾವುದೇ ಮಹತ್ವವನ್ನು ಸಾಧಿಸುವುದಿಲ್ಲ ಎನ್ನುತ್ತಾರೆ.

ರಂಗ ಕಲ್ಪನೆಗಳ ಕುರಿತು ಚರ್ಚಿಸುವುದರಲ್ಲಿ ಇರುವ ಸವಾಲೆಂದರೆ ಅವುಗಳ ಆ ದೃಶ್ಯ ಗುಣ – ನಾಟಕದ ವಸ್ತುವಿನಂತೆ ಅದು ಪ್ರೇಕ್ಷಕನಿಗೆ ಸುಲಭ ಗ್ರಾಹ್ಯವಲ್ಲ ಪ್ರೇಕ್ಷಕನ ಅನುಭವಕ್ಕೆ ಬರುವುದು ಆ ರಂಗ ಕಲ್ಪನೆಗಳನ್ನು ಗುರುತಿಸಿ ಚರ್ಚಿಸಲು ಒಂದು ಕನಿಷ್ಟ ಮಟ್ಟದ ವಿಶೇಷ ತಯಾರಿರಬೇಕು. ಎಂಬುವುದು ಲೇಖಕರ ಅಭಿಮತ.

ರಂಗ ಕಲ್ಪನೆಯು ರಂಗ ತಂತ್ರಕ್ಕೆ ಪರ್ಯಾಯವಾದ ಪದವಲ್ಲ ಬದಲಾಗಿ ಅದು ನಾಟಕದಲ್ಲಿ ಸಾವಯವಾಗಿ ಬೆಳೆದು ಬಂದಿದೆ ಎಂಬುವುದಕ್ಕೆ ನನ್ನ ಸಹಮತವಿದೆ.

ನೈಜತೆ ಈ ರೀತಿಯಾಗಿರುತ್ತದೆ. ನಾಟಕಗಾರನೊಬ್ಬ ಅವನ ನಾಟಕ ರಂಗದ ಮೇಲೆ ಆಡುವುದಕ್ಕಲ್ಲ ಓದಲಿಕ್ಕಷ್ಟೇ ಎಂದು ನಿರ್ಧರಿಸಬಹುದು. ಆದರೆ ಆತ ತಾನು ನಾಟಕ ಬರೆಯುತ್ತಿದ್ದೇನೆ ಎಂದು ತಿಳಿಸಿದಾಗಲೇ ಆತನ ಕೃತಿಗಳಿಗೆ ರಂಗ ಕಲ್ಪನೆಗಳ ಕಾರ್ಯವೆಸಲು ತೊಡಗುತ್ತಾನೆ. ಆ ಕೃತಿಯನ್ನು ನಾಟಕವನ್ನಾಗಿಸುತ್ತದೆ. ತಾನು ಬರೆಯುವ ನಾಟಕವನ್ನು ಬರಹಗಾರ ರಂಗಭೂಮಿಯ ಮೇಲೆ ಕಲ್ಪಿಸಿಕೊಂಡಿರುತ್ತಾನೆ.

ಈ ಕೃತಿಯು ಎರಡನೇ ಭಾಗದಲ್ಲಿ ವಿಶ್ಲೇಷಿಸುವಾಗ ಲೇಖಕರಿಗೆ ಕಂಡ

ನೈಜ ಸಂಗತಿ ಎಂದರೆ ಕುವೆಂಪುರವರ ನಾಟಕದಲ್ಲಿ ಮೇಲು ನೋಟಕ್ಕೆ ಕಥೆಯನ್ನು ಮುಂದುವರೆಸಲು ಮಾತಿನ ಕ್ರಿಯೆಯನ್ನು ಅವಲಂಬಿಸಿದಂತೆ ಕಂಡರೂ ಅಲ್ಲಿ ನಾಟಕೀಯ ಪ್ರಜ್ಞೆ ಮರೆಯಾಗುವುದಿಲ್ಲ. ನಾಟಕೀಯತೆಯೂ ಪಾತ್ರಗಳ ಸಂಭಾಷಣೆಯಿಂದಾಚೆಗೂ ರೂಪುಗೊಳ್ಳುತ್ತಿರುತ್ತದೆ.

'ಕುವೆಂಪುರವರ ನಾಟಕಗಳಲ್ಲಿ ವಸ್ತುವಿನ ಪಾತ್ರಕ್ಕೆ ತಕ್ಕನಾಗಿ ದೃಶ್ಯ ಸಂಖ್ಯೆಯು ಬೆಳೆದಿದೆಯೇ ಹೊರತು ಪಶ್ಚಿಮದಲ್ಲಿದ್ದಂತೆ ಐದು ಅಂಕಗಳ ಹಾಗೂ ಪ್ರತಿ ಅಂಕದಲ್ಲಿ ಐದು ದೃಶ್ಯಗಳು ಎನ್ನುವಂತಹ ಸಮೀಕರಣಗಳಿಗೆ ಒಳಿಗಾಗಿಲ್ಲ' ಎಂಬುವುದನ್ನು ಲೇಖಕರು ಕುವೆಂಪುರವರ ನಾಟಕವನ್ನು ಗಮನಿಸಿ ತಿಳಿದುಕೊಂಡಿದ್ದಾರೆ.

ಕುವೆಂಪುರವರು ಜಲಗಾರ, ಶ್ಮಶಾನ ಕುರುಕ್ಷೇತ್ರ, ಚಂದ್ರಹಾಸ, ಯಮನ ಸೋಲು ನಾಟಕಗಳ ದೃಶ್ಯ ವಿಭಜನೆಯನ್ನು ಮಾಡುವಾಗ ಹೇಗೆ ತಮ್ಮ ವಿವೇಕವವನ್ನು ಉಳಿಸಿಕೊಂಡಿದ್ದಾರೆ ಎಂಬುವುದನ್ನು ಲೇಖಕರು ಈ ಕೃತಿಯ ಎರಡನೇ ಭಾಗದಲ್ಲಿ ವಿವರಿಸಿದ್ದಾರೆ.

ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣಗಳು ಕನ್ನಡ ಮಾಧ್ಯಮದಲ್ಲೇ ಇರಬೇಕು. ಪ್ರಪಂಚದ ಎಲ್ಲ ಜ್ಞಾನವೂ ಕನ್ನಡದ ಮೂಲಕವೇ ಬರಬೇಕು ಎನ್ನುವ ಕಂಬಾರರ ಮಾತನ್ನು ಸಶಕ್ತ ಹಾಗೂ ಸೃಜನಶೀಲ ಶಿಕ್ಷಣ ಸಂಸ್ಕೃತಿಯ ಬೇರುಗಳು ಅಡಗಿರುವುದನ್ನು ಗುರುತಿಸಬಹುದು. ದೇಶಿಯ ಚಿಂತನ ಕೃತಿಯು 65 ಸಂಶೋಧನ ಹಾಗೂ ಚಿಂತನಶೀಲ ಲೇಖನಗಳ ಸಂಗ್ರಹವಾಗಿದೆ. ಮೂರು ದಶಕಗಳ ವಿಸ್ತಾರ ಈ ಲೇಖನದಲ್ಲಿದೆ ಒಟ್ಟು ನಾಲ್ಕು ಭಾಗಗಳಲ್ಲಿ ಇಲ್ಲಿನ ಲೇಖನವನ್ನು ವಿಂಗಡಿಸಲಾಗಿದೆ. ಮೊದಲ ಭಾಗದ ಲೇಖನಗಳು ಕಂಬಾರರ ಅನುವಭದಿಂದ ಹಿಡಿದು ಪ್ರಸ್ತುತ ವಿಮರ್ಶೆ ಸಂಶೋಧನೆ ಶಿಲ್ಪ ಶಾಸ್ತ್ರದವರೆಗಿನ ವಿಷಯಗಳು ಇವೆ.

ಒಟ್ಟಿನಲ್ಲಿ ಕಂಬಾರರಿಗೆ ಗ್ರಾಮ ಬದುಕಿನ ಸೂಕ್ಷ್ಮ ಒಳಸೆಳೆತಗಳು ಗೊತ್ತು. ದುಡಿದ ಹೊಟ್ಟೆಗೆ ಸಂಪೂರ್ಣ ಊಟವೇ ಮುಖ್ಯವೇ ಹೊರತು ಫಲಹಾರವಲ್ಲ. ಶ್ರಮ ಬದುಕಿನಿಂದ ಬಂದ ಕಂಬಾರರು ಆ ಅವಶ್ಯಕತೆಗಳನ್ನು ತಮ್ಮ ಕೃತಿಗಳಲ್ಲಿ ಚಿತ್ರಿಸುತ್ತಾರೆ . ಈ ಅಂಶಗಳು ವಿರೇಶ್ ಬಡಿಗೇರ ಮನಸ್ಸು ಸೆಳೆದಿವೆ.

ರಂಗ ನಿರ್ದೇಶನಗಳ ಮೂಲಕ ಶೋಧಿಸಬಹುದಾದ ಇನ್ನಿತರ ಅಂಶಗಳು, ಸ್ವತಗ, ಪ್ರಕಾಶ, ಆಶರೀರವಾಣಿಯಂತಹ ರಂಗ ತಂತ್ರಗಳಾಗಿವೆ. ರಂಗ ತಂತ್ರಗಳು ಒಂದರ್ಥದಲ್ಲಿ ರಂಗಭೂಮಿಯು ತನ್ನ ಮಿತಿಗಳನ್ನು ಮೀರಲು ಹುಡುಕಿಕೊಳ್ಳುವ ಸೃಜನಶೀಲ ದಾರಿಗಳಾಗಿವೆ. ಕುವೆಂಪುರವರ ನಾಟಕಗಳಲ್ಲಿ ಸ್ವಗತ ಹಾಗೂ

ಅಂತಹ ಇನ್ನಿತರ ರಂಗ ತಂತ್ರಗಳು ಇಂತಹ ವಿವಿಧ ಉದ್ದೇಶ ಪರಿಣಾಮಗಳಿಗೆ ಬಳಕೆಯಾಗಿವೆ.

ಕುವೆಂಪು ನಾಟಕಗಳಲ್ಲಿ ಸ್ವಗತದ ಬಳಕೆಯು ಅತ್ಯಂತ ಯಶಸ್ವಿಯಾಗಿರುವುದು ಯಮನ ಸೋಲು ನಾಟಕದಲ್ಲಿ ಇಡೀ ನಾಟಕವು ತನ್ನ ನಾಟಕೀಯತೆಯನ್ನು ಸ್ವಗತದ ಪರಿಣಾಮದ ಮೇಲೆ ಅವಲಂಬಿಸಿದೆಯೆನೋ ಎಂಬಂತೆ ಸ್ವಗತವು ಇಲ್ಲಿನ ರಂಗ ಕ್ರಿಯೆಯ ಆಧಾರ ಸ್ಥಂಭವಾಗಿ ನಿಂತಿವೆ.

ಈ ಕೃತಿಯ ಮೂರನೇ ಭಾಗದಲ್ಲಿ ಕಂಪೆನಿ ನಾಟಕ, ನವೋದಯ ಕಾಲದ ನಾಟಕ, ಆಧುನಿಕ ಕನ್ನಡ ಸಾಹಿತ್ಯದ ನಾಟಕ. ಇದು ಎರಡನ್ನೂ ತುಲನೆಗೆ ಒಳಪಡಿಸಿದ್ದಾರೆ. ನವೋದಯ ಕಾಲದಲ್ಲಿ ನಾಟಕ ರಚನೆಯಲ್ಲಿ ತೊಡಗಿದ ನಾಟಕಕಾರರು ಕಂಪೆನಿ ನಾಟಕಗಳನ್ನು ಖಂಡಿಸಿಯೇ ತಮ್ಮ ನಾಟಕಗಳ ಅಸ್ಮಿತೆಯನ್ನು ಗುರುತಿಸಿಕೊಳ್ಳಲು ಮೊದಲು ಮಾಡಿದರು. ಕುವೆಂಪುರವರು ಕಂಪೆನಿ ನಾಟಕಗಳ ಕುರಿತ ತಮ್ಮ ಅಸಮಾಧಾನವನ್ನು ಹೇಗೆ ವ್ಯಕ್ತಪಡಿಸಿದ್ದಾರೆ ಎಂಬುವುದನ್ನು ಲೇಖಕರು ಈ ಕೃತಿಯನ್ನು ತಿಳಿಸಿದ್ದಾರೆ.

ನಾಟಕ ಪಠ್ಯವನ್ನು ಮುಂದಿಟ್ಟುಕೊಂಡು ನಮ್ಮ ಕಾಲದ ತಲ್ಲಣಗಳನ್ನು ವ್ಯಕ್ತಪಡಿಸುತ್ತಾ ನಮ್ಮ ಸಮಕಾಲೀನ ರಂಗಭೂಮಿಯ, ಶೂದ್ರ ತಪಸ್ವಿ ನಾಟಕವನ್ನು ಮಂಜುನಾಥ ಬಡಿಗೇರರವರು 2010ರಲ್ಲಿ ನಿರ್ದೇಶಿಸಿದ್ದಾರೆ. ಅಲ್ಲಿ ಆದಂತಹ ಬದಲಾವಣೆ ಹಾಗೂ ಮೂಲ ನಾಟಕಕ್ಕೆ ಹಾಗೂ ಪ್ರದರ್ಶನ ನಾಟಕದಲ್ಲಿದ್ದ ವ್ಯತ್ಯಾಸದ ಕುರಿತು ಲೇಖಕರು ತಿಳಿಸಿದ್ದಾರೆ. ಒಟ್ಟಿನಲ್ಲಿ ಕುವೆಂಪು ನಾಟಕಗಳು ಮತ್ತೆ ರಂಗದ ಮೇಲೆ ಬರುತ್ತಿವುದಕ್ಕೆ ಇರುವ ಮತ್ತೊಂದು ಕಾರಣವೆಂದರೆ ಸದ್ಯದ ಕನ್ನಡ ರಂಗಭೂಮಿಯು ತನ್ನ ನಿರ್ದೇಶಕರಿಗೆ ದೊರಕಿಸಿಕೊಟ್ಟಿರುವ ಆತ್ಮ ವಿಶ್ವಾಸ ಎನ್ನಬಹುದು.

ಈ ಲೇಖನದಲ್ಲಿ ಕನ್ನಡ ರಂಗಭೂಮಿಯ ಎರಡು ತಲೆಮಾರಿನ ಇಬ್ಬರು ನಿರ್ದೇಶಕರ ಜೊತೆ ಸಂವಾದವನ್ನು ನಡೆಸಿದ್ದಾರೆ. ಸಿ ಬಸವಲಿಂಗಯ್ಯನವರು ಕುವೆಂಪು ನಾಟಕಗಳ ಕೆಲವು ಮಹತ್ವದ ಪ್ರಯೋಗಗಳನ್ನು ನಿರ್ದೇಶಿಸಿದರು. ಮಂಜುನಾಥ ಬಡಿಗೇರ ಅವರು ಈ ತಲೆಮಾರಿನ ನಿರ್ದೇಶಕರಲ್ಲಿ ವಿಶಿಷ್ಟ ಸಂವೇದನೆ ಹಾಗೂ ಶೈಲಿಗೆ ಹೆಸರಾಗಿರುವವರಲ್ಲಿ ಪ್ರಮುಖರು, ಈ ಇಬ್ಬರು ನಿರ್ದೇಶಕರು ಕುವೆಂಪುರವರನ್ನು ಕಾಣುವ ಬಗೆಗಳು ಬೇರೆ.

ಕುವೆಂಪುರವರು ನಾಟಕವನ್ನು ಸಾಹಿತ್ಯ ಚಟುವಟಿಕೆ ಎಂದೇ ಪರಿಭಾವಿಸಿದ್ದರು ಎಂದು ಬಸವಲಿಂಗಯ್ಯನವರು ಸರಿಯಾಗಿ ಗಮನಿಸುತ್ತಾರೆ.

ಆಗಿನ ನವೋದಯದ ಎಲ್ಲಾ ಮಹತ್ವದ ಲೇಖಕರಿಗೆ ಕುವೆಂಪುರವರು ವಿವಿಧ ಸಾಹಿತ್ಯ ಪ್ರಕಾರಗಳಲ್ಲಿ ನಡೆಸಿದ್ದರು.

ಬಸವಲಿಂಗಯ್ಯನವರು ಕುವೆಂಪುರವರು ನಾಟಕವನ್ನು ಥಿಯಾರಿಯೆಂದು ಗುರುತಿಸುವುದು ಪ್ರತಿಮಾ ಮಾರ್ಗದಲ್ಲಿದ್ದ ಅವರಿಗಿದ್ದ ನಂಬಿಕೆ, ಹಾಗೂ ಅದು ಸಾಹಿತ್ಯದಲ್ಲಿ ಹೇಗೆ ಕಂಡುಬರಬೇಕೆಂಬುದರ ಕುರಿತು ಸ್ಪಷ್ಟ ಅರಿವು, ಕುವೆಂಪುರವರ ನಾಟಕಗಳಲ್ಲಿ ಒಂದು ಆಸ್ಮಿತೆಯನ್ನು ತರುತ್ತೆ ಎಂದು ಬಸವಲಿಂಗಯ್ಯನವರು ಅಭಿಪ್ರಾಯಪಡುತ್ತಾರೆ.

ಬಸವಲಿಂಗಯ್ಯನವರು ಹೇಳುವಂತೆ ಕುವೆಂಪು ಅವರ ನಾಟಕಗಳಲ್ಲಿ ಅಲ್ಲಿನ ಪಾತ್ರ ಚಿತ್ರಣವನ್ನು ಉದಾಹರಣೆಯಾಗಿ ನೀಡುತ್ತಾರೆ ಕುವೆಂಪುರವರ ನಾಟಕದಲ್ಲಿ ಶ್ರೀ ರಾಮ, ಶ್ರೀ ಕೃಷ್ಣರು ಬಂದರೂ ಅವರೆಂದೂ ಭಕ್ತಿಯನ್ನು ಉದ್ದೇಶಿಸುವಂತಹ ಕ್ರಿಯೆಯನ್ನು ಮಾಡುವುದಿಲ್ಲ. ಬದಲಾಗಿ ಅವರು ಕುವೆಂಪುರವರು ಹೇಳಲು ಹೊರಟಿರುವ ತತ್ವಕ್ಕೆ ಪ್ರತಿಮೆಯಾಗಿ ನಿಲ್ಲುತ್ತಾರೆ.

ನಾಟಕ ಕೃತಿ ಹಾಗೂ ರಂಗಭೂಮಿಯ ನಡುವಿನ ವಿಶಿಷ್ಟ ಸಂಬಂಧವು ಯಾವುತ್ತಿಗೂ ಕುತೂಹಲಕರ ಸಂವಾದಗಳನ್ನು ಹುಟ್ಟಿಸುತ್ತಿರುತ್ತದೆ. ತಮ್ಮ ಮಧ್ಯಮಗಳ ಭಿನ್ನತೆಯ ನಡುವೆಯೂ ಒಂದನ್ನೊಂದು ಅವಲಂಬಿಸಲೇಬೇಕಾದ ಅನಿವಾರ್ಯಕತೆಯನ್ನು ಈ ಎರಡು ಕಲೆಗಳು ಒಂದೇ ಕುವೆಂಪು ನಾಟಕಗಳಲ್ಲಿನ ರಂಗಕಲ್ಪನೆಗಳನ್ನು ಚರ್ಚಿಸುವುದರ ಮೂಲಕ ಆ ನಾಟಕಗಳ ಪ್ರಯೋಗಗಳನ್ನು ವಿಶ್ಲೇಷಣೆಗೆ ಒಳಪಡಿಸುವುದರ ಮೂಲಕ ಕುವೆಂಪು ನಾಟಕ ಹಾಗೂ ಕನ್ನಡ ರಂಗಭೂಮಿಯ ನಡುವೆ ನಡೆದಿರುವ ಸೂಕ್ಷ್ಮ ಸಂವಾದವನ್ನು ಶೋಧಿಸುವದರ ಮೂಲಕ ಈ ಅಧ್ಯಾಯನವು ಒಂದು ಸಾಂಸ್ಕೃತಿಕ ವಿಧ್ಯಮಾನವನ್ನು ದಾಖಲಿಸಿದೆ.

**ಉಪಸಂಹಾರ:**

ಡಾ. ವಿರೇಶ ಬಡಿಗೇರೆರವರು ಬರೆದ 'ಕನ್ನಡ ಸಾಹಿತ್ಯ ಪರಂಪರೆ ಮತ್ತು ಕಂಬಾರರು' ಎಂಬ ಕೃತಿ ಹಾಗೂ 'ಕುವೆಂಪು ನಾಟಕಗಳು ಮುಂದಿರುವ ರಂಗಕಲ್ಪನೆ' ಎಂಬ ಉತ್ಥಾನ ಭಾರೀಘಾಟ್ ರವರ ಕೃತಿಯನ್ನು ವಿಶ್ಲೇಷಣೆಗೆ ಒಳಪಡಿಸಿ ಸಮೀಕ್ಷೆ ಮಾಡಲಾಗಿದೆ ಈ ಲೇಖನವನ್ನು ಓದುವುದರಿಂದ ಸಹಹೃದಯಿಗಳಿಗೆ ಎರಡೂ ಕೃತಿಯನ್ನು ತೌಲನಿಕವಾಗಿ ಅಧ್ಯಯನ ಮಾಡಲು ಸಾಧ್ಯವಿದೆ.

ಪ್ರಸ್ತುತ ಈ ಲೇಖನದಲ್ಲಿ ತೌಲನಿಕವಾದ ಅಧ್ಯಯನಕ್ಕೆ ಒಳಪಡಿಸಿಲ್ಲ ತೌಲನಿವಾಗಿ ಅಧ್ಯಯನ ಮಾಡಿ ಲೇಖನ ಬರೆಯುವವರಿಗೆ ಇದು ಆಧಾರ ಗ್ರಂಥ

ವಾಗಿದೆ. ಇಲ್ಲಿ ಇರುವ ವಿಷಯವನ್ನು ಪರಿಚಯ ಮಾಡಲಾಗಿದೆ.

ಕಂಬಾರರು ರಚಿಸಿರುವ ಅಣ್ಣತಂಗಿ, ಕರಿಮಾಯಿ, ಸಿಂಗಾರವ್ವ ಮತ್ತು ಅರಮನೆ, ಜಿ.ಕೆ ಮಾಸ್ತರ ಪ್ರಣಯ ಪ್ರಸಂಗ, ಶಿಖರಸೂರ್ಯ ಈ ಒಟ್ಟು ಕಾದಂಬರಿಗಳು ಕನ್ನಡ ಸಾಹಿತ್ಯ ಸಂಸ್ಕೃತಿಯ ಅತ್ಯಂತ ಅಳವಾದ ತಿಳಿವಳಿಕೆಯಿಂದ ಮಾಡಿರುವಂತಹುದು, ಆದ್ದರಿಂದ ವಿರೇಶ ಬಡಿಗೇರರವರು ಕಂಬಾರರ ಕಾದಂಬ ರಿಯ ಬಗ್ಗೆ ಬರೆದ ವಿಶ್ಲೇಷಣೆಯನ್ನು ಆಧಾರವಾಗಿಟ್ಟುಕೊಂಡು, ಕುವೆಂಪು ನಾಟಕಗಳು ಮುಂದಿಡುವ ರಂಗಕಲ್ಪನೆ ಎಂಬಕೃತಿಯನ್ನು ಓದಿದ್ದರೆ ಹೊಸ ಲೇಖಕರಿಗೆ ಕಾದಂಬರಿಯನ್ನು ನಾಟಕವನ್ನಾಗಿ ಹೇಗೆ ಪರಿವರ್ತಿಸಬಹುದು ಎಂಬ ಸೃಜನಶೀಲ ಚಿಂತನೆ ಮೂಡಲು ಸಾಧ್ಯ.

## ಆಕರ ಗ್ರಂಥಗಳು:

1. ವಿರೇಶ ಬಡಿಗೇರ. (2012). ಕನ್ನಡ ಸಾಹಿತ್ಯ ಪರಂಪರೆ ಮತ್ತು ಕಂಬಾರರು. ಅಂಕಿತ ಪ್ರಕಾಶನ. ಬೆಂಗಳೂರು.
2. ಉತ್ಥಾನ ಭಾರೀಘಾಟ್. (2016). ಕುವೆಂಪು ನಾಟಕಗಳು ಮುಂದಿಡುವ ರಂಗಕಲ್ಪನೆ. ಕುವೆಂಪು ಭಾಷಾ ಪ್ರಾಧಿಕಾರ. ಬೆಂಗಳೂರು.

## ಪರಾಮರ್ಶನ ಗ್ರಂಥಗಳು:

1. ಶಿವರುದ್ರಪ್ಪ ಜಿ. ಎಸ್. (2015). ಕುವೆಂಪು ಪುನರಾಲೋಕನ. ಅಂಕಿತ ಪುಸ್ತಕ. ಬೆಂಗಳೂರು.
2. ಚಂದ್ರಶೇಖರ ಕಂಬಾರ. (2004). ದೇಶೀಯ ಚಿಂತನೆ. ಅಂಕಿತ ಪುಸ್ತಕ. ಬೆಂಗಳೂರು.